ರೂಪಕ, ಹೋಲಿಕೆಗಳಲ್ಲೇ ಈ ಪದ್ಯ ಮೈ ಪಡೆದಿದೆ. ನಿಶ್ಯಬ್ದದಲ್ಲಿ ಭೀಕರ ಶಬ್ದಮೂಡಿ ಮಾಯವಾಗಿ ಮತ್ತೆ ಮೂಡುವ ನಿಶ್ಯಬ್ದವನ್ನು ಗಮನಿಸುತ್ತಾ ಹೊಳೆದ ತಿಳಿವಳಿಕೆಯ ಎಚ್ಚರವನ್ನು ತೋರುವ ವೈಚಾರಿಕ ನಾಟಕದಂಥ ಪದ್ಯ ಇದು. 'ಸುಡುತಿಹುದು ಸುಡುಸುಡನೆ', 'ನಡುಗಿ ನಡನಡನೆ', 'ಕರ್ಕಶದ ಕಟುನೀಲ ಕಾಂತಿಯನು ಕಣ್ಗೆ ತೋರಿ' ಇಂಥ ಪದ ಜೋಡಣೆಗಳು ರೈಲಿನ ಲಯಬದ್ಧ ಸದ್ದನ್ನು ಅನುಕರಿಸುವ ಹಾಗೆ ಪದ್ಯದುದ್ದಕ್ಕೂ ಇವೆ.

* * *

ಚಿಕ್ಕಂದಿನಲ್ಲಿ ರೈಲು ನನಗೊಂದು ಬೆರಗು. ಉಗಿಯ ಬಂಡಿ ಸೃಷ್ಟಿಯಾದಾಗಲೂ ಜನ ಬೆರಗು ಪಟ್ಟಿದ್ದರು. ಸ್ಟೇಷನ್ನು, ಕಂಬಿ, ಸಿಗ್ನಲ್ಲು, ಗಂಟೆ, ಸಿಳ್ಳೆ, ಗಾರ್ಡು, ಟಿಟಿ, ಉದ್ದಾನುದ್ದ ರೈಲು ವೇಗ ಪಡೆದಂತೆ ಹುಟ್ಟುವ ತಾಳ ಹಾಕಿದಂಥ ಸದ್ದು ಎಲ್ಲವೂ ಯಾವುದೋ ದಿವ್ಯ ಆಚರಣೆ ಅನಿಸಿತ್ತು, ಈಗ ಪ್ಯಾಸೆಂಜರ್ ರೈಲುಗಳಲ್ಲಿ ಕಿಕ್ಕಿರಿದು ತುಂಬಿರುವ ಗಾರ್ಮೆಂಟ್ ಫ್ಯಾಕ್ಟರಿ ಕೆಲಸದ ಹುಡುಗಿಯರು, ಕೆಲಸ ಹುಡುಕಿ ಹಳ್ಳಿಯಿಂದ ನಗರಕ್ಕೆ ಬರುವ ಕೆಲಸಗಾರರು, ಗುಮಾಸ್ತರಿಗೂ ಸುಖ ಪ್ರಯಾಣದ ಮೆಟ್ರೋ, ಶತಾಬ್ದಿ, ವಂದೇ ಭಾರತ್‌ಗಳಲ್ಲಿ ಸಾಗುವ ನಾಗರಿಕ ಮಂದಿಗೂ ಇರುವ ವ್ಯತ್ಯಾಸ ಕಣ್ಣಿಗೇ ರಾಚುತ್ತದೆ. ಮುಂಬೈ ಲೋಕಲ್ ರೈಲುಗಳ ವೇಗ, ಜನರ ಧಾವಂತ ನೋಡಿ ಆಧುನಿಕ ಬದುಕು ಕೊನೆಯಿರದ ಚಲನೆ, ಮಾಡಿದ್ದನ್ನೇ ದಿನದಿನವೂ ಮಾಡುವ ನಿರ್ಜೀವ ಬದುಕು ಅನಿಸಿತ್ತು. ಅದನ್ನು ಚಿತ್ರಿಸಿದ 'ಮುಂಬೈ ಜಾತಕ'ದಂಥ ಕವಿತೆ ಈಗ ಎಲ್ಲ ಪಟ್ಟಣಗಳಿಗೂ ಅನ್ವಯವಾಗುತ್ತಿದೆ.

ತೊಂಬತ್ತರ ದಶಕದಲ್ಲಿ 'ರೈಲ್ ರಸ್ತೆ'ಯನ್ನು ಮತ್ತೆ ಓದಿದಾಗ 'ವಿಜ್ಞಾನ ಸೂರ್ಯ'ನನ್ನು ಕೊಂಡಾಡಿದ ಕವಿಯೇ ವಿಜ್ಞಾನದ ಆವಿಷ್ಕಾರವಾದ ರೈಲು ಹೇಗೆ ಮನುಷ್ಯರ, ಪ್ರಾಣಿಗಳ, ನಿಸರ್ಗದ ರಕ್ತವನ್ನೆಲ್ಲ ಹೀರಿ 'ನಗರ-ನಾಗರಿಕತೆ'ಗೆ ರಕ್ತ ಸರಬರಾಜು ಮಾಡುತಿದೆ ಎಂಬ ದರ್ಶನವನ್ನೂ ಮಾಡಿಸಿದ್ದಾರೆ. ಅದನ್ನು ಯಾರೂ ನಂಬಲಾರರೆಂಬ ಆತಂಕ ಅನುಭವಿಸಿದ್ದಾರೆ; 'ನಾಗರಿಕ' ಅಸಮಾನತೆಯ ಕ್ರೌರ್ಯದ ತಳಹದಿ ಇದೆ, ಅದೇ 'ಕಲ್ಕಿ'ಯ ಅವತಾರಕ್ಕೆ ಕಾರಣವೆಂದು ಹೊಳೆಯಿಸಿದ್ದಾರೆ ಅನಿಸಿತ್ತು.

ಯಂತ್ರಗಳೇ ಜೀವ ತಳೆದು ಮನುಷ್ಯರನ್ನು ಎಲ್ಲೆಲ್ಲಿಂದ ಎಲ್ಲೆಲ್ಲಿಗೋ ಸಾಗಿಸುತ್ತ ನಿಯಂತ್ರಿಸುತ್ತವೆ, ಆ ನಿಯಂತ್ರಣವು ಹೆಚ್ಚುತ್ತಾ 'ನಾವು ಮನುಷ್ಯರು' ಎಂದು ನಾವೇ ಕಂಡುಹಿಡಿದ ಯಂತ್ರವನ್ನೇ ಒಪ್ಪಿಸ ಬೇಕಾದ ವ್ಯಂಗ್ಯ ಸೃಷ್ಟಿಯಾಗಿದೆ. ಯಾಂತ್ರಿಕತೆಯ ಈ ಗೆಲುವನ್ನು ಹೆಣವಾಗಿರುವ ಮೌನ, ಸುಡು ಬಿಸಿಲು, ಬೋಳು ಮರದ ಎಲುಬು ನೆರಳು, ಬಡಕಲಾದ ದನ ಇವೆಲ್ಲದರ ನಿಶ್ಚಲತೆ. ರೈಲಿನೆಂಜಿಣ್ಣು, ಕರ್ಕಶ ಸಿಳ್ಳೆ, ಕಂಪಿಸುವ ಕಂಬಿ ದಾರಿಗಳ ಜೀವಂತಿಕೆ ಚಲನೆಯ ವ್ಯಂಗ್ಯದಲ್ಲಿ ಕವಿತೆ ಹಿಡಿದಿಟ್ಟಿದೆ.

ಬೇರೂರಿ ಬದುಕಬೇಕಾದ 'ಊರು' ನಾಶವಾಗುತ್ತಾ ಉಸಿರಿಗೆ ಉಬ್ಬಸಪಡುತ್ತಾ ಮಹಾನಗರಗಳು ನರಳಾಡುವುದನ್ನು ಕಂಡಾಗ ಈ ಪದ್ಯ 'ನೂತ್ನ ನಾಗರಿಕತೆ'ಯ ವಿಷಾದಭರಿತ ವ್ಯಾಖ್ಯಾನವಾಗಿ ಕಾಣುತ್ತದೆ. ರೈಲು ಜಗತ್ತಿನ ಅನೇಕ ಮುಖ್ಯ ಕಾದಂಬರಿ, ಸಿನಿಮಾಗಳಲ್ಲೂ ಪಾತ್ರಗಳ ಸಂತೋಷಕ್ಕಿಂತ ವೈಯಕ್ತಿಕ ದುರಂತದ ಸಂಕೇತವಾಗಿರುವುದೇ ಹೆಚ್ಚು ಅನ್ನುವುದೂ ಮನಸಿಗೆ ಬರುತ್ತಿದೆ, ಹಾಗೆಂದು ಯಾಂತ್ರಿಕ ಬದುಕು ಮಾಮೂಲಾಗುವ ಮುನ್ನ ಇದ್ದ ನೈಸರ್ಗಿಕ ಅನಿಸುವ ಸ್ಥಿತಿಗೆ ಮರಳಲಾದೀತೆ? ಸಾಧ್ಯವಿಲ್ಲ. ಅನ್ನವನ್ನು ಪಡೆಯುವ, ಅಪಮಾನಗಳನ್ನು ಮೀರುವ, ಹೊಸ ಅವಕಾಶಗಳನ್ನು ಒದಗಿಸುವ ನಗರದ ನೂತ್ನ ನಾಗರಿಕತೆಯ ಅನಿವಾರ್ಯ ಸೆಳೆತವನ್ನು ಬಿಡಲಾರದ ಸ್ಥಿತಿಯಲ್ಲಿದ್ದೇವೆ. ಸಹಜ ಸಮುದ್ರದ ವರ್ಣನೆಯ ಹಾಗೇ ಸಂಪದ್ಭರಿತ ಪುರವರ್ಣನೆಯನ್ನೂ ಕನ್ನಡದ ಹಳೆಯ ಕವಿಗಳು ಕಡ್ಡಾಯ ಮಾಡಿಕೊಂಡದ್ದಕ್ಕೆ ಇಂಥ ಸೆಳೆತವೇ ಕಾರಣವೋ?

ಕುವೆಂಪು ಕವಿತೆಗಳ ಭಾವ-ವಿಚಾರ-ರಚನೆಯ ಅಚ್ಚುಕಟ್ಟುಗಳು ನನ್ನ ಮನಸನ್ನು ಸೆಳೆಯುತ್ತವೆ, ಅವು ಮಂಡಿಸುವ ಬದುಕಿನ ತತ್ವಗಳು ಮನಸಿನಲ್ಲಿ ಊರಿಕೊಂಡು ವೈಚಾರಿಕ ಸ್ಪಷ್ಟತೆಗೆ ಅಗತ್ಯವಾದ ಸಿದ್ಧತೆಯನ್ನು ಒದಗಿಸುತ್ತವೆ. ●



